# ಹೋರಾಟದ ಮುಳುಗಡೆ ಗದ್ದೆಗಳು

ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ಸಮುದ್ರ ಮಟ್ಟದಿಂದ ಗರಿಷ್ಠ ಮಟ್ಟ 1819 ಅಡಿ ನೀರು ಸಂಗ್ರಹವಾಗುತ್ತೆ. ಇದು ವಿದ್ಯುತ್ ಉತ್ಪಾದನೆಗೆ ಸಹಕಾರಿ. ಮಳೆಗಾಲ ಮುಗಿದು ನೀರಿನ ಸಂಗ್ರಹ ಕಡಿಮೆಯಾದಂತೆ ಮುಳುಗಡೆಯಾಗಿದ್ದ ಗದ್ದೆಗಳಲ್ಲಿ ಭತ್ತ ಬೆಳೆಯಲಾಗುತ್ತದೆ. ಈ ಸಮಯದ ಬೆಳೆ ಮಳೆಗಾಲದ ಇಳುವರಿಗಿಂತ ಹೆಚ್ಚೇ ಇರುತ್ತೆ. ಹದವಾದ ಮಳೆ, ಬಿಸಿಲು, ಹೆಚ್ಚು ಇಳುವರಿಯ ಭತ್ತ ಉತ್ಪಾದನೆಗೆ ಉತ್ತಮ.

ಅಣೆಕಟ್ಟೆಯಿಂದಾಗಿ ಕೆಲವರು ಊರು, ಜಮೀನು ಮುಳುಗಡೆಯಾಗಿ, ಪರಿಹಾರ ಪಡೆದು ಊರು ಬಿಟ್ಟು ಬೇರೆ ಕಡೆ ವಲಸೆ ಹೋಗಿದ್ದು ನೋಡಿದ್ದೇವೆ. ಇನ್ನು ಉಳಿದವರು ಅಲ್ಲೇ ಇದ್ದು ಭಾವನಾತ್ಮಕ ಸಂಬಂಧ ಉಳಿಸಿಕೊಂಡಿರುವುದನ್ನೂ ಕಂಡಿದ್ದೇವೆ. ಚಿತ್ರದಲ್ಲಿರುವುದು ಹೊಸನಗರ ಪಟ್ಟಣದ ಹೊರವಲಯದ ರಾಣೆಬೆನ್ನೂರು ಬೈಂದೂರ್ ರಾಜ್ಯ ಹೆದ್ದಾರಿ ಪಕ್ಕದ ಚಿತ್ರಣ. ಅಣೆಕಟ್ಟೆಯಲ್ಲಿ ನೀರು ಸಂಗ್ರಹ ಗರಿಷ್ಠ ಮಟ್ಟ ತಲುಪಿ ದಿನಗಳು ಕಳೆದಂತೆ ನೀರು ಕಡಿಮೆಯಾದಾಗ ತಲೆ ಎತ್ತಿರುವ 'ಮುಳುಗಡೆ ಗದ್ದೆ'.

ಹೊಸನಗರ, ಸಾಗರ ತಾಲ್ಲೂಕಿನ ಭಾಗದಲ್ಲಿ ನೀರು ಸಂಗ್ರಹ ಕಡಿಮೆಯಾದಂತೆ ಎಲ್ಲಾ ಕಡೆ ಮುಳುಗಡೆ ಗದ್ದೆಗಳು ಕಾಣಬಹುದು. ಚಿಕ್ಕ ಚಿಕ್ಕ ಒಡ್ಡು, ಪಂಪ್‌ನಿಂದ ನೀರು ಹರಿಸುವುದು ಸಾಮಾನ್ಯ. ಇನ್ನು ಬಿಡಾಡಿ ಜಾನುವಾರು, ನವಿಲು, ಕಾಡುಕೋಣಗಳಿಂದ ಬೆಳೆಹಾನಿ ತಡೆಯಲು ಗದ್ದೆಯಲ್ಲಿ ಹಕ್ಕೆಮನೆ ಮಾಡಿ ಇಲ್ಲೇ ಹಗಲು ರಾತ್ರಿ ಪಾಳಿಯಲ್ಲಿ ಕಾಯುತ್ತಾರೆ. ಈ ವನವಾಸ ಬೆಳೆ ಕೈಗೆ ಬರುವವರೆಗೂ ಮುಂದುವರೆಯುತ್ತದೆ. ಇದೊಂದು ರೀತಿ ಮೂರು ನಾಲ್ಕು ತಿಂಗಳ ಹೋರಾಟದ ಕಾಲ. ಈ ಗದ್ದೆಗಳಿಗೆ ವಾರಸುದಾರ ಯಾರು ಬೇಕಾದರೂ ಆಗಬಹುದು. ಮೊದಲು ಬೇಲಿ ಹಾಕಿ ಹೂಟಿ ಮಾಡಿದಾತನೇ ವಾರಸುದಾರ. ಅಂತೂ ಆಹಾರ ಉತ್ಪಾದನೆಗೆ ಮುಳುಗಡೆ ಗದ್ದೆಗಳು ತುಂಬಾ ಕಾಣಿಕೆ ನೀಡುತ್ತವೆ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ





# ಸುಗಂಧರಹಿತ ವನ ಮಲ್ಲಿಕಾ

ಗಿಡ ನೆಟ್ಟು, ನೀರೆರೆದು, ಗೊಬ್ಬರ ಹಾಕಿ, ಬೆಳೆದ ಮಲ್ಲಿಗೆ ಗಿಡದ ಹೂವು ಇದಲ್ಲ. ಬೆಟ್ಟ ಗುಡ್ಡಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ ಕಾಡಮಲ್ಲಿಗೆ ಹೂವು. ಹೊಸ ಮಳೆ ಬರುತ್ತಿದ್ದಂತೆ ಹಸಿರು ಗಿಡದ ತುಂಬ ಸಂಜೆ ಮೊಸರು ಚೆಲ್ಲಿದಂತೆ ಹೂವುಗಳು ಅರಳುತ್ತವೆ. ಬೆಳಗಾಗುತ್ತಿದ್ದಂತೆ ಹೂವುಗಳೆಲ್ಲವು ಉದುರುತ್ತವೆ. ಚೆಲುವು ತುಂಬಿದ ಈ ಹೂವುಗಳು ಸುಗಂಧರಹಿತ. ವಿಶಾಲವಾಗಿ ಹರಡುವ ಬಳ್ಳಿಯ ಒಂದು ಗೊಂಚಲಿನಲ್ಲಿ ಮೂರರ ತನಕ ಹೂವುಗಳಿರುತ್ತವೆ. ಸಸ್ಯಶಾಸ್ತ್ರದಲ್ಲಿ 'ಜಾಸ್ಮಿನಮ್ ಸ್ಪಿಫೋಲಿಯಮ್' ಎಂಬ ಹೆಸರಿರುವ ಈ ಗಿಡ ಭಾರತ, ಶ್ರೀಲಂಕಾ, ಅಂಡಮಾನ್ ದ್ವೀಪಗಳಿಗೆ ಸೀಮಿತ. ಇದರ ಬೇರನ್ನು ಔಷಧಕ್ಕಾಗಿ ಬಳಸಲಾಗುತ್ತದೆ. ಕಾಯಿಗಳನ್ನು ಆದಿವಾಸಿಗಳು ಅವರೆಕಾಳಿನಂತೆ ಸಾರಿಗೆ ಬಳಸುತ್ತಾರೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

# ಅತಿ ಚಿಕ್ಕ ಇಂಗ್ಲಿಷ್ ಶಬ್ದಕೋಶ

ಇದು ನನ್ನ ಬಳಿ ಇರುವ ಅತಿ ಚಿಕ್ಕ ಗಾತ್ರದ ಇಂಗ್ಲಿಷ್ ಶಬ್ದಕೋಶ. ಸುಮಾರು ನಲವತ್ತು ವರ್ಷಗಳ ಹಿಂದೆ ಇದನ್ನು ಖರೀದಿಸಿದ ನೆನಪು. ಇದರ ಹೆಸರು 'ಸ್ಟಾರ್ ಇಂಗ್ಲಿಷ್ ಡಿಕ್ಷನರಿ'. ಉದ್ದ ಒಂದೂವರೆ ಅಂಗುಲ ಇದ್ದರೆ, ಅಗಲ ಒಂದು ಕಾಲು ಅಂಗುಲ ಮಾತ್ರ. ಇದನ್ನು ಕೊಂಡಾಗ 650 ಪುಟಗಳಿದ್ದವು. ಈಗ ಇದರಲ್ಲಿ 604 ಪುಟಗಳು ಮಾತ್ರ ಇವೆ. ಮುಖಪುಟದ ಕಡೆಗೆ ಇರುವ ಮೇಲು ಹೊದಿಕೆ ಮತ್ತು ನಾಲ್ಕು ಪುಟಗಳು ಹರಿದಿದ್ದರೆ, ಹಿಂಭಾಗದ ಸುಮಾರು ನಲವತ್ತಾರು ಪುಟಗಳು ಹರಿದು ಹೋಗಿವೆ. ವಿ ಇಂದ ಝುಡ್‌ವರೆಗಿನ ಪದಗಳು ಈ ಶಬ್ದಕೋಶದಲ್ಲಿ ದೊರೆಯುವುದಿಲ್ಲ. ಇದನ್ನು ಖರೀದಿಸಿದ್ದ ಬೆಲೆ ನೆನಪಿಲ್ಲ. ಮ್ಯಾಗ್ನಿಫೈಯಿಂಗ್ ಗ್ಲಾಸ್ ಬಳಸದೆ ಈಗ ಇದನ್ನು ಓದುವುದು ಸಾಧ್ಯವಿಲ್ಲದುದ್ದರಿಂದ ಆ್ಯಂಟಿಕ್ ಪೀಸ್‌ನಂತೆ ಇಟ್ಟುಕೊಂಡಿದ್ದೇನೆ.

–ಮುರಲೀಧರ ಕುಲಕರ್ಣಿ, ಬೀದರ್



— 5 —

ally need to look up, we decided to leave out as many words of this simple kind as we could. (Occasionally we made an exception and included a "simple" word because it offered some special difficulty in spelling or hyphenation.) The result has been that the "Little Webster" has room to explain an unusually large number of relatively rare and difficult words.
But leaving out the everyday words gave us a further advantage: we had plenty of room for fuller and clearer explanations. It is clear that a definition, to be of use to